MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 26-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ನೀರುಳ್ಳಿ ರಫ್ತು 64 ಶೇಕಡಾ ಹೆಚ್ಚಳ, 6 ವರ್ಷಗಳ ಗರಿಷ್ಠ ಮಟ್ಟಕ್ಕೆ

2022–23 ರಲ್ಲಿ ಭಾರತದ ನೀರುಳ್ಳಿ ರಫ್ತು 64 ಶೇಕಡಾ ಹೆಚ್ಚಳದೊಂದಿಗೆ ಹಿಂದಿನ 6 ವರ್ಷಗಳ ಗರಿಷ್ಠ ಮಟ್ಟಕ್ಕೇರಿದೆಯೆನ್ನಲಾಗಿದೆ. ಮೌಲ್ಯದಲ್ಲಿ 22 ಶೇಕಡಾ ಹೆಚ್ಚಳದೊಂದಿಗೆ $ 561 ಮಿಲಿಯನ್ ಟನ್ ಗಳಿಕೆಯಾಗಿದೆಯೆನ್ನಲಾಗಿದೆ. ಅಧಿಕ ಪೂರೈಕೆ ಹಾಗೂ ಭರಪೂರ ವಿದೇಶಿ ಬೇಡಿಕೆಯಿಂದ ರಫ್ತು ಹೆಚ್ಚಳವಾಗಿದೆಯೆನ್ನಲಾಗಿದೆ. ಈಗಲೂ ಉತ್ತಮ ಬೇಡಿಕೆಯಿದ್ದು ಈ ವರ್ಷವೂ ಹೆಚ್ಚಿನ ರಫ್ತು ಸಾಧ್ಯತೆಯಿದೆಯೆನ್ನಲಾಗಿದೆ. ಆದರೆ ಪ್ರತಿಕೂಲ ಹವಾಮಾನದಿಂದ ಗುಣಮಟ್ಟದ ನೀರುಳ್ಳಿ ಲಭ್ಯತೆ ಕಡಿಮೆಯಾಗಿದೆಯೆನ್ನಲಾಗಿದೆ.

## ಬ್ರೆಜಿಲ್‌ನಿಂದ ಉದ್ದು ಆಮದು ಸಾಧ್ಯತೆ

ದೇಶೀ ಪೂರೈಕೆ ಹೆಚ್ಚಳಗೊಳಿಸುವ ನಿಟ್ಟಿನಲ್ಲಿ ಬ್ರೆಜಿಲ್‌ನೊಂದಿಗೆ ಉದ್ದು ಆಮದಿನ ಬಗ್ಗೆ ಮಾತುಕತೆ ಪ್ರಗತಿಯಲ್ಲಿದೆಯೆನ್ನಲಾಗಿದೆ. ಇದುವರೆಗೆ ಮ್ಯಾನ್ಮಾರ್‌ನಿಂದ 2 ಲಕ್ಷ ಟನ್ ಉದ್ದು ಆಮದಾಗಿದೆಯೆನ್ನಲಾಗಿದೆ. ಆಮದಿಗೆ ಮ್ಯಾನ್ಮಾರ್‌ನ ಮೇಲಿನ ಅವಲಂಬನೆ ತಪ್ಪಿಸಲು ಇತರ ದೇಶಗಳಿಂದ ಉದ್ದು ಆಮದು ಮಾಡುವ ಚಿಂತನೆ ಪ್ರಗತಿಯಲ್ಲಿದೆಯೆನ್ನಲಾಗಿದೆ.

## ಗೋಧಿ ಮೇಲಿನ ರಫ್ತು ನಿಷೇಧ ಈ ವರ್ಷ ಮುಂದುವರಿಕೆ

ಈ ವರ್ಷ ಗೋಧಿ ಮೇಲಿನ ರಫ್ತು ನಿಷೇಧ ಮುಂದುವರಿಯಲಿದೆಯೆನ್ನಲಾಗಿದೆ. ಗೋಧಿ ಖರೀದಿ ಗುರಿಯಾದ 34 ಮಿಲಿಯನ್ ಟನ್‌ಗಳಿಗಿಂತ ಕೆಳಗಿದೆಯೆನ್ನಲಾಗಿದೆ. ಎಪ್ರಿಲ್ ತಿಂಗಳಿಗೆ ಹೋಲಿಸಿದರೆ ಗೋಧಿ ಮೇ ತಿಂಗಳಲ್ಲಿ ದರ ಹೆಚ್ಚಳ ಕಂಡಿದೆಯೆನ್ನಲಾಗಿದೆ.

## ಅಧಿಕ ಉತ್ಪಾದನೆಯ ಅಂದಾಜು, ಬೇಡಿಕೆ ಇಳಿಕೆ, ಮಲೇಶೀಯನ್ ಪಾಮೆಣ್ಣೆ ದರ 2 ಶೇಕಡಾ ಇಳಿಕೆ

ಪರ್ಯಾಯ ಖಾದ್ಯತೈಲಗಳ ದರ ಇಳಿಕೆ, ಅಧಿಕ ಉತ್ಪಾದನೆಯ ಶಂಕೆ ಹಾಗೂ ಬೇಡಿಕೆ ಇಳಿಕೆಯಿಂದ ಮಲೇಶೀಯನ್ ಪಾಮೆಣ್ಣೆ ದರ 2 ಶೇಕಡಾ ಇಳಿಕೆ ಟನ್‌ಗೆ 78 ರಿಂಗಿಟ್ಸ್ ಇಳಿಕೆಯಾಗಿ 3403 ರಿಂಗಿಟ್ಸ್ ($ 767.31) ಆಗಿದೆ.

## ಫಿಚ್ ಗ್ರೂಪ್ ರಿಸರ್ಚ್ ಅಂದಾಜಿನಂತೆ ಮುಂದಿನ ವರ್ಷಗಳಲ್ಲಿ ಪಾಮೆಣ್ಣೆ ದರ ಇನ್ನೂ ಇಳಿಕೆ

2023–24 ರಲ್ಲಿ ಜಾಗತಿಕ ಪಾಮೆಣ್ಣೆ ಹೆಚ್ಚುವರಿ ಉತ್ಪಾದನೆ (ಮಿಗತೆ ದಾಸ್ತಾನು) 7 ಲಕ್ಷ ಟನ್‌ಗಳಿಂದ 2026–27 ಕ್ಕೆ 1.9 ಮಿಲಿಯನ್ ಟನ್‌ಗಳಿಗೇರಲಿದೆಯೆಂದ ಫಿಚ್ ಗ್ರೂಪ್ ರಿಸರ್ಚ್ ಅಂದಾಜಿಸಿದ್ದು ಮುಂದಿನ ಅವಧಿಯಲ್ಲಿ ಹಾಗೂ ವರ್ಷಗಳಲ್ಲಿ ದರ ಇಳಿಕೆಯಾಗುತ್ತಾ ಸಾಗಿ 2025/27 ರ ಅವಧಿಯಲ್ಲಿ ಗಣನೀಯ ಇಳಿಕೆಯಾಗಬಹುದೆಂದು ಅಂದಾಜಿಸಿದೆ. ಈ ಇತರ ಖಾದ್ಯತೈಲ ಹಾಗೂ ಪಾಮೆಣ್ಣೆ ದರದ ಅಂತರವೂ ಇಳಿಕೆಯಾಗುತ್ತಿದೆ.

## ಉತ್ಪಾದನೆ ಇಳಿಕೆ, ಅಧಿಕ ಬೇಡಿಕೆ ಜೀರಿಗೆ ದರ ದಾಖಲೆ ಹೆಚ್ಚಳ

ಜೀರಿಗೆ ಸರಾಸರಿ ದರ ಹಿಂದಿನ ವರ್ಷಕ್ಕೆ ಹೋಲಿಸಿದರೆ 104 ಶೇಕಡಾ ಹೆಚ್ಚಳದೊಂದಿಗೆ ರೂ.450 ಆಗಿದೆಯೆನ್ನಲಾಗಿದೆ. ಉತ್ಪಾದನೆ ಇಳಿಕೆ ಹಾಗೂ ಭರಪೂರ ಬೇಡಿಕೆಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಬೆಳೆಯುವ ಕೃಷಿಕರ ಜೀರಿಗೆಯ ಬದಲು ಇತರ ಬೆಳೆಗಳನ್ನು ಬೆಳೆಯಲು ಮುಂದಾಗಿ, ಜೀರಿಗೆ ಬೆಳೆಯುವ ಪ್ರದೇಶ ಇಳಿಕೆಯಾಗಿ ಉತ್ಪಾದನೆಯೂ ಇಳಿಕೆಯಾಗಿದೆಯೆನ್ನಲಾಗಿದೆ.